(ಗೊಂದಲ)

ಟೇರ್ಮನ್ :– ನೀವು ಕುಳಿತುಕೊಳ್ಳುತ್ತೀರೋ ಅಥವಾ ಇಲ್ಲವೋ ಹೇಳಿ?

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ :– ಕೊಡುವುದಿಲ್ಲ.

Chairman: Nothing will go on record.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ :– ಕೊಡುವುದಿಲ್ಲ ಎಂದು ಅಧ್ಯಕ್ಷರಿಗೆ ಹೇಳುತ್ತಿದ್ದಾರೆ. ಇದು ಸದನಕ್ಕೆ ಅಗೌರವ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ :– ಇದು ಅತೀ ಆಯಿತು. ಕಾನೂನುಬಾಹಿರವಾದುದು. ಸದನಕ್ಕೆ ಅವಹೇಳನ ತರತಕ್ಕಂಥ ಕೆಲಸವನ್ನು ಶಿವರಾಮೇಗೌಡರು ಮಾಡುತ್ತಿದ್ದಾರೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶಿವರಾಮೇಗೌಡರು ಅಧ್ಯಕ್ಷರ ಪೀಠದ ಮುಂಭಾಗದಲ್ಲಿ ಬಂದು ಧರಣಿ ಕುಳಿತರು.)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ಮಾನ್ಯ ಸದಸ್ಯರಾದ ಶಿವರಾಮೇಗೌಡರಲ್ಲಿ ನಾನು ವಿನಂತಿಯನ್ನು ಮಾಡುತ್ತಿದ್ದೇನೆ. ಇದು ಬಹಳ ಐತಿಹಾಸಿಕವಾದಂಥ ಒಂದು ವಿಧೇಯಕವನ್ನು ನಾನು ಮಂಡಿಸುತ್ತಿದ್ದೇನೆ. ತಮ್ಮ ಏನೊಂದು ಅನಿಸಿಕೆಯನ್ನು ಹೇಳುತ್ತಿದ್ದೀರಿ, ಅದರ ಬಗ್ಗೆ ಸರ್ಕಾರ ಪೂರ್ಣ ವಿಚಾರವನ್ನು ಮಾಡುತ್ತದೆ. ಇದರ ಬಗ್ಗೆ ಬಹಳ ಹೇಳಬೇಕಾಗಿಲ್ಲ. ಇಂಥ ಸಂದರ್ಭದಲ್ಲಿ ತಾವು ಇಲ್ಲಿ ಬಂದು ಧರಣಿ ಮಾಡುವುದು, ಅದೇ ಪ್ರಕಾರ ಹಠವನ್ನು ಮಾಡುವುದು ಸರಿಯಲ್ಲ. ದಯಮಾಡಿ ತಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ, ತಮ್ಮ ಸ್ಥಾನಕ್ಕೆ ತಾವು ವಾಪಸ್ ಹೋಗಬೇಕು.

ಶ್ರೀ ವಾಟಾಳ್ ನಾಗರಾಜ್ :– ಧರಣಿ ಮಾಡಿದರೂ ಸಭೆ ನಡೆಯಬಹುದು ಎಂದು ತೀರ್ಪನ್ನು ಕೊಟ್ಟಿದ್ದಾರೆ. ಅವರು ಕುಳಿತಿರಲಿ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷಣಿಯವರೇ, ಮತ್ತೊಂದು ಸಲ ತಮ್ಮ ಪರವಾಗಿ ಅವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಮಾನ್ಯ ಶಿವರಾಮೇಗೌಡರು ಅವರು ತಮ್ಮ ಸ್ಥಾನಕ್ಕೆ ಹೋಗಬೇಕು.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶಿವರಾಮೇಗೌಡರು ಧರಣಿಯನ್ನು ಕೈಬಿಟ್ಟು ತಮ್ಮ ಸ್ಥಾನಕ್ಕೆ ಹೋದರು.)

ಶ್ರೀ ವಾಟಾಳ್ ನಾಗರಾಜ್ :– ಇದು ನಾಟಕ. ಇದು ಧರಣಿಯೇ

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ :– ತಾವು ನನಗೆ ಪಾಯಿಂಟ್ ಆಫ್ ಆರ್ಡರನ್ನು ರೈಜ್ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ಅವರು ಮಾತನಾಡುವ ಕಾಲಕ್ಕೆ ಅವರಿಗೆ ಅವಕಾಶ ಇದೆ. ಅವರು ಏನು ಹೇಳಬೇಕೋ ಅದನ್ನು ಹೇಳಬಹುದು. ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡಿ ಹೇಳಬೇಕು ಎಂದೇನೂ ಇಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ :– ನಾನು ಯಾವ ಆಧಾರದ ಮೇಲೆ ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡಿದ್ದೇನೆ ಅಂದರೆ ಮೊನ್ನೆ ಜಿಲ್ಲಾಪರಿಷತ್ತಿನ ವಿಧೇಯಕವನ್ನು ತಂದರು. ಅವರು ವಿರೋಧ ಪಕ್ಷದ ನಾಯಕರು ಯಾವ ಆಧಾರದಮೇಲೆ ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡಿದರು. ಆದರ ಆಧಾರದಮೇಲೆ ನಾನು ಕೇಳುತ್ತೇನೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ :– ಇದು ಕೇವಲ ಪ್ರಚಾರಕ್ಕಾಗಿ ಮಾಡುವಂತಹ ಕೆಲಸ ಆಗಿದೆ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ :– ಪ್ರಚಾರಕ್ಕೋಸ್ಕರ ಯಾರು ಮಾಡುತ್ತಿದ್ದಾರೆ. ಈ ರಾಜ್ಯದ ಜನಕ್ಕೆ ಗೊತ್ತಿದೆ. ಅವರು ತಂದಿದ್ದು ತಪ್ಪು ಅಂತ ಅಲ್ಲ. ನನ್ನ ವಾದ ಏನು ಅಂದರೆ ನಾನು ಕ್ರಿಯಾಲೋಪವನ್ನು ಎತ್ತಿದ್ದೇನೆ. ಅದಕ್ಕೆ ನೀವು ಅವಕಾಶಮಾಡಿಕೊಡಬೇಕು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :– ಯಾವ ರೂಲ್‌ನಲ್ಲಿದೆ?

(ಗೊಂದಲ)

ಟೇರ್ಮನ್ : ಮಾನ್ಯ ಶಿವರಾಮೇಗೌಡ್ರೆ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಕಾವೇರಿಯ ಬಗ್ಗೆ ಮಾತನಾಡುವುದಕ್ಕೂ ಅವಕಾಶ ಇದೆ. ಮಾತನಾಡುಬಹುದು., ಆದರೆ ಕ್ರಿಯಾಲೋಪ ಎತ್ತಿ ಮಸೂದೆ ಮೇಲೆ ಮಂಡಿಸುವುದಕ್ಕೆ ಬಿಡುವುದಿಲ್ಲ ಅಂತ ಹೇಳಿದೆ ಸರ್ಕಾರದ ಪರ ಇರುವ ಸದಸ್ಯರೇ ಅಡ್ಡಿಮಾಡುವುದಾದರೆ ಇದು ಏನು ಪರಿಸ್ಥಿತಿ?

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ :– ನಾವು ಕೃಷ್ಣ ಜಲಾನಯನಕ್ಕೆ ವಿರೋಧ ಅಲ್ಲ. ಕಾವೇರಿಯನ್ನು ಮಾಡಿ.

SRI, D.B. CHANDRE GOWDA : Who is he to question? (Interruptions) No. I will not participate in this.

(Sri D.B. Chandre Gowda withdrew from the House)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಈಗ ಶಿವರಾಮೇಗೌಡ್ರ ಪ್ರಶ್ನೆ ಏನಿದೆ ಅವರ ಕಳಕಳಿ ಎಲ್ಲರಿಗೂ ಗೊತ್ತಾಗಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಿಮಗೂ ಗೊತ್ತಿದೆ. ಆದರೆ ಈ ಪ್ರಾಧಿಕಾರಕ್ಕೆ ಏನೇನೂ ಮಸೂದೆಯನ್ನು ತರುತ್ತಿದ್ದಾರೆ. ಕಾವೇರಿಯ ಬಗ್ಗೆ ತರಬೇಡಿ ಎಂದು ನಾವು ಯಾರು ಅಡ್ಡಿಪಡಿಸಿಲ್ಲ. ಎರಡು ತಿಂಗಳಿಂದ ಅವರು ಏನು ಮಾಡುತ್ತಿದ್ದರು?

(ಭಾರಿ ಗೊಂದಲ)

Chairman : Nothing will go on record, except the Minister's statement.

(ಭಾರಿ ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಈಗ ವಿರೋಧ ಪಕ್ಷದ ನಾಯಕರು ಹೋಗಿದ್ದಾರೆ. ನಾನು ವಿನಂತಿ ಮಾಡುತ್ತಿದ್ದೇನೆ. ಮಾನ್ಯ ಸದಸ್ಯರು.....ಅವರು ವಾದ ಮಾಡಬೇಕಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ : ಅವರನ್ನು ಸದನದಿಂದ ಹೊರಗೆ ಹಾಕಿ.

ಶ್ರೀ ಆರ್.ವಿ. ದೇಶಪಾಂಡೆ : ಇದರಲ್ಲಿ ಪಾರ್ಟಿಸಿಪೆಟ್ ಮಾಡುವುದಿಲ್ಲ ಅಂತ ಹೊರಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೋಗಿದ್ದಾರೆ. ಅಂತಹ ಪರಿಸ್ಥಿತಿಯಲ್ಲಿ ನಮಗೂ ಪಟ್ಟಾಗುತ್ತದೆ. ನಾವು ಹೊರಗಡೆ ಹೋಗಬೇಕಾಗುತ್ತದೆ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಈ ಸದನವನ್ನು ದುರುಪಯೋಗ ಮಾಡಿಕೊಂಡಿದ್ದಾರೆ.

(ಭಾರಿ ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಶಿವರಾಮೇಗೌಡ್ರಿಗೆ...

(ಭಾರಿ ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಆದರೆ ಮಾನ್ಯ ಶಿವರಾಮೇಗೌಡ್ರು ಉದ್ದೇಶವಾಗಿ ಈ ರೀತಿಯಾಗಿ ಮಾಡುವುದು ಸರಿಯಿಲ್ಲ. ಕಾವೇರಿಯ ಬಗ್ಗೆ ನಮಗೂ ಕಳಕಳಿ ಇದೆ. ಶಿವರಾಮೇಗೌಡ್ರು ಮುಖ್ಯಮಂತ್ರಿಗಳಿಗೆ ಏತಕ್ಕೆ ಹೇಳಲಿಲ್ಲ.

Chairman : Nothing will go on record.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷೆಣಿಯವರೆ, ಶ್ರೀ ಎಲ್.ಆರ್. ಶಿವರಾಮೇಗೌಡರು ನಾನೇ ಕಾವೇರಿ ಬಗ್ಗೆ ಹೋರಾಟ ಮಾಡಿದೆ, ಇನ್ಯಾರು ಹೋರಾಟ ಮಾಡಿಲ್ಲ ಎನ್ನುತ್ತಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷೆಣಿಯವರೆ, ಇವರು ಯಾವ ಹೋರಾಟಗಾರರು?

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ರಾಜ್ಯಪಾಲರ ಭವನದ ಗೇಟಿಗೆ ಒಂದು ಬೀಗ ಹಾಕಿದ್ದೇವೆ. ಅದಕ್ಕೆಂತ ಬೇಕಾಗಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಶ್ರೀ ವಾಟಾಳ್ ನಾಗರಾಜ್‌ರವರ ಜೊತೆ ಹೋದರೆ ಒಂದು ಪ್ರಚಾರ ಸಿಗುತ್ತದೆಂದು ಹೋಗಿದ್ದಾರಷ್ಟೆ ಬೇರೇನೂ ಇಲ್ಲ.

ಶ್ರೀ ಬಿ.ಎಚ್. ಬನ್ನಿಕೋಡ್ : ಶ್ರೀ ಶಿವರಾಮೇಗೌಡರು ಒಂದು ನಾಟಕ ನಡೆಸುತ್ತಿದ್ದಾರೆ.

ಟೇರ್ಕನ್ : ಶಿವರಾಮೇಗೌಡರೆ, ನೀವು ನಮಗೆ ಮಾತ್ರ ಅಗೌರವ ತೋರಿಸಲಿಲ್ಲ. Leader of the Opposition, a very respected leader. ಅವರ ಬಗ್ಗೆ ತುಚ್ಛವಾಗಿ ಮಾತನಾಡಿದ್ದೀರಿ. Please expunge it.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ನನಗೆ ವಿರೋಧ ಪಕ್ಷದ ನಾಯಕರ ಬಗ್ಗೆ ಗೌರವವಿದೆ.

Chairman : I am not allowing.

(Interruptions)

Chairman : The Speaker may, direct any member whose conduct is, in his opinion, grossly disorderly to withdraw immediately from the House *and any member so ordered to with draw shall do so forthwith and shall absent himself during the remainder of the day's sitting.*

Will you please do that? Will you please withdraw from the House?

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಶ್ರೀ ರಾಯರೆಡ್ಡಿಯವರೆ, ಈ ಸದನದಲ್ಲಿ ಬಹಳ ಹಗುರವಾಗಿ ಮಾತನಾಡುವುದು ಬೇಕಾಗಿಲ್ಲ. ಏನು ಟೇಮಾರಿ ಹಾಕುವುದು? ನಾನೇನು ಅಂತಹ ಅಪವಾದ ಮಾಡಿರುವುದು? ನಾನೇನಾದರೂ ತಪ್ಪು ಮಾಡಿದ್ದರೆ ಟೇಮಾರಿ ಹಾಕಲಿ.

(ಗೊಂದಲ)

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ.ಎಚ್. ಬನ್ನಿಕೋಡ್‌ರವರು ಸಭಾತ್ಯಾಗ ಮಾಡಿದರು).

Chairman : He is ordered to withdraw but he is not doing it.

ಶ್ರೀ ಸಿ. ಬೈರೇಗೌಡ : ತಾವು ತೀರ್ಪು ಕೊಟ್ಟಿದ್ದೀರಿ. ತಮ್ಮ ತೀರ್ಪಿಗಾದರೂ ಬೆಲೆ ಇದೆಯೇ ? ಇಲ್ಲವೇ? ತಮ್ಮ ತೀರ್ಪಿಗೆ ಗೌರವ ಕೊಡಬೇಕೋ ಅಥವಾ ಬೇಡವೋ? ಎನ್ನತಕ್ಕಂಥಾದ್ದು ಮೊದಲು ತೀರ್ಮಾನವಾಗಬೇಕು. ತಾವು ಮಾನ್ಯ ಸದಸ್ಯರಾದ ಶ್ರೀ ಶಿವರಾಮೇಗೌಡರನ್ನು ಹೊರಗಡೆ ಹೋಗಬೇಕೆಂದು ಹೇಳಿದ್ದೀರಿ.

(ಗೊಂದಲ)

+ ಶ್ರೀ ಹೆ.ಜೆ.ಆರ್. ಸಿದ್ಧಾಯ್ (ಕನಕಪುರ) : ಮಾನ್ಯ ಅಧ್ಯಕ್ಷೆಣಿಯವರೆ, ಸರ್ಕಾರದವರು ಬಹಳ ಒಳ್ಳೆಯ ಉದ್ದೇಶದಿಂದ ಕೃಷ್ಣಾ ಪ್ರಾಧಿಕಾರವನ್ನು ರಚಿಸಬೇಕೆಂದು ಹೊರಟಿದ್ದಾರೆ. ನಮ್ಮ ರಾಜ್ಯಕ್ಕಾಗಿ ಬಹಳಷ್ಟು ಜನ ಕಷ್ಟಪಟ್ಟು ತ್ಯಾಗ ಮಾಡಿ, ಹಿರಿಯರು ರಾಜ್ಯದ ಏಕೀಕರಣಕ್ಕಾಗಿ ಹೋರಾಡಿದ್ದು,